**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 26/2019

ಪಿಡಬ್ಲು : 5 ಸಿಡಬ್ಲು :42

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಬಸಪ್ಪ ಶೆಟ್ಟೆಪ್ಪ ಅಪ್ಪಾಜಿಗೋಳ |
| ತಂದೆಯ ಹೆಸರು | : ಶ್ರೀ ಶೆಟ್ಟೆಪ್ಪ ಅಪ್ಪಾಜಿಗೋಳ |
| ವಯಸ್ಸು | : 47 ವರ್ಷ |
| ಉದ್ಯೋಗ | : ಕೂಲಿ |
| ವಾಸ್ತವ್ಯ | : ಚಿಂಚಣಿ |
| ದಿನಾಂಕ | : 24-01-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 41 ನನ್ನ ದೊಡ್ಡಪ್ಪನ ಮಗ. ನಮ್ಮ ಮನೆತನದ ಕುಟುಂಬಕ್ಕೆ ಜಮೀನು ಇದ್ದು ಅದರ ಸರ್ವೇ ನಂಬರ 65 ಒಟ್ಟು ಕ್ಷೇತ್ರ 21 ಎಕರೆ ಇರುತ್ತದೆ. ನಮ್ಮ ಚಿಕ್ಕಪ್ಪನ ಕುಟುಂಬಕ್ಕೆ ಜಮೀನು ಇದ್ದು ಅದು ಚಿಂಚಣಿ ಹದ್ದಿಯೊಳಗೆ ಬರುತ್ತದೆ. ಸದರಿ ಜಮೀನು ಸರ್ವೇ ನಂಬರ 66 ಒಟ್ಟು ಕ್ಷೇತ್ರ 20 ಎಕರೆ ಇದ್ದು, ಅದರಲ್ಲಿ ಅವರ ಅಣ್ಣತಮ್ಮಂದಿರಗೆ ಪಾಲಾಗಿದ್ದು ಚಾಸಾಃ 41 ರವರ ಪಾಲಿಗೆ 2 ಎಕರೆ ಜಮೀನು ಬಂದಿದ್ದು, ಅದು ಅವರ ತಂದೆಯ ಹೆಸರಿನಲ್ಲಿರುತ್ತದೆ. ಅವರ ತಂದೆಯವರು ಈಗ 14-15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಇನ್ನೂವರೆಗೂ ಸದರಿ ಜಮೀನು ಅವರ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಜಮೀನನ್ನು ಚಾಸಾಃ41 ರವರೆ ಸಾಗುವಳಿ ಮಾಡುತ್ತಾರೆ. ಸದರಿ ಜಮೀನು ಕಲ್ಲು ಮತ್ತು ಮಟ್ಟಿಯಿಂದ ಕೂಡಿರುತ್ತದೆ. ಸದರಿ ಜಮೀನಿನಲ್ಲಿ ಒಂದು ಸಾದಾ ಹಂಚಿನ ಮನೆ ಇರುತ್ತದೆ. ನಮ್ಮ ಜಮೀನಿನಿಂದ ಸ್ವಲ್ಪ ದೂರದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿತ್ತು.

2. ಸದರಿ ರಸ್ತೆ ಕಾಮಗಾರಿ ಮಾಡುವ ಕಾರ್ಮಿಕರಿಗೆ ತಾತ್ಕಾಲಿಕವಾಗಿ ಶೆಡ್ಡು ನಿರ್ಮಿಸಿಕೊಳ್ಳಲು ಜಾಗವನ್ನು ಕೊಟ್ಟಿರುವುದು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಎಷ್ಟು ಶೆಡ್ಡುಗಳನ್ನು ನಿರ್ಮಿಸಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾಃ 41 ರವರ ಜಮೀನಿನಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ ಶೆಡ್ಡಿನ ಹತ್ತಿರ ಅಧಿಕಾರಿಗಳು ಬಂದು ಪರಿಶೀಲನೆ ಮಾಡಿ ದೂರು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಆದರೆ ಈಗ 7−8 ವರ್ಷಗಳ ಹಿಂದೆ ನಾನು ಜಮೀನಿನ ಹತ್ತಿರ ಹೋಗುತ್ತಿದ್ದಾಗ ಪೋಲಿಸರು ಒಂದು ದಾಖಲೆಗೆ ಒಂದು ಸಹಿ ತೆಗೆದುಕೊಂಡಿರುತ್ತಾರೆ.

3. ಈ ದಿನ 1 ರಿಂದ 4 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆರೋಪಿತ ಪರ ವಕೀಲರು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯತಿ ಅರ್ಜಿ ಸಲ್ಲಿಸಿದ್ದು, ಅದನ್ನು ನ್ಯಾಯಾಲಯ ಪುರಸ್ಕರಿಸಲಾಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

2016 ನೇ ಇಸವಿಯಲ್ಲಿ ನಿಪ್ಪಾಣಿ − ಮಹಾಲಿಂಗಪೂರ ರಸ್ತೆ ಕಾಮಗಾರಿ ನಡೆದಿತ್ತು ಎಂದರೆ ಸರಿ. ಸದರಿ ಮಾಹಾಲಿಂಗಪೂರ ರಸ್ತೆ ಕಾಮಗಾರಿ ಕೆಲಸಕ್ಕೆ ತೆಲಂಗಾಣ ರಾಜ್ಯದಿಂದ ಈ ಪ್ರಕರಣದ 1 ರಿಂದ 4 ನೇ ಆರೋಪಿತರು ಇವರು ಚಾಸಾಃ 41 ರವರ ಜಮೀನಿನ ಹತ್ತಿರ ಬಂದು ತಾವು ತೆಲಂಗಾಣ ರಾಜ್ಯದಿಂದ ರಸ್ತೆ ಕಾಮಗಾರಿ ಕೆಲಸಕ್ಕಾಗಿ 23 ಜನ ಗಂಡಸರು 8 ಜನ ಹೆಂಗಸರು ಮತ್ತು ಇಬ್ಬರು ಮಕ್ಕಳನ್ನು ಕರೆದುಕೊಂಡು ಬರುವುರಿದ್ದು ಸದರಿ ಕೂಲಿ ಕಾರ್ಮಿಕರ ಜನರಿಗೆ ವಾಸಿಸಲು ತಾತ್ಕಾಲಿಕವಾದ ಶೆಡ್ಡು ನಿರ್ಮಿಸಲು ಜಮೀನನ್ನು ಬಾಡಿಗೆಯಿಂದ ಕೇಳಿದ್ದು ಆಗ ಚಾಸಾಃ 41 ರವರು ತನ್ನ ಜಮೀನಿನಲ್ಲಿ ತಾತ್ಕಾಲಿಕವಾದ ಶೆಡ್ಡನ್ನು ನಿರ್ಮಿಸಲು ಪ್ರತಿ ತಿಂಗಳು

ರೂ.3,000/- ಬಾಡಿಗೆ ಠರಾಯಿಸಿ ತನ್ನ ಜಮೀನನ್ನು ಬಾಡಿಗೆಯಿಂದ ಕೊಟ್ಟಿದ್ದ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

2. ಆ ಪ್ರಕಾರ ಚಾಸಾಃ 41 ರವರ ಜಮೀನಿನಲ್ಲಿ ಒಟ್ಟು 18 ತಾತ್ಕಾಲಿಕವಾದ ಶೆಡ್ಡುಗಳನ್ನು ನಿರ್ಮಿಸಿದ್ದು ನಂತರ ದಿಃ 12.08.2016 ರಂದು ತೆಲಂಗಾಣ ರಾಜ್ಯದಿಂದ ರಸ್ತೆ ಕಾಮಗಾರಿಗಾಗಿ ಒಟ್ಟು 23 ಜನ ಗಂಡಸರು 8 ಜನ ಹೆಂಗಸರು ಮತ್ತು ಇಬ್ಬರು ಮಕ್ಕಳನ್ನು ಕರೆದುಕೊಂಡು ಬಂದು ಶೆಡ್ಡಿನಲ್ಲಿ ಇರಿಸಿದ್ದರು ಎಂದರೆ ಸರಿಯಲ್ಲ. ಸದರಿ ಕಾರ್ಮಿಕರಿಗೆ ದಿನಾಲೂ ಮುಂಜಾನೆ ರಸ್ತೆ ಕಾಮಗಾರಿ ಕೆಲಸಕ್ಕೆ ಕರೆದುಕೊಂಡು ಹೋಗಿ ಸಾಯಂಕಾಲದ ವೇಳೆಗೆ ಪುನಃ ಶೆಡ್ಡುಗಳಿಗೆ ತಂದು ಬಿಡುತ್ತಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

3. ದಿಃ 12.11.2016 ರಂದು ಬೆಂಗಳೂರಿನಿಂದ ಸಿ.ಐ.ಡಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಜನ ಸದರಿ ಜಮೀನಿಗೆ ಬಂದು ಪರಿಶೀಲನೆ ಮಾಡಿದಾಗ ಸದರಿ ಕಾರ್ಮಿಕರು ಜೀತ ಕಾರ್ಮಿಕರೆಂದು ಕಂಡುಬಂದಿದ್ದು ಸದರಿಯವರನ್ನು ರಕ್ಷಿಸಿ ಚಿಕ್ಕೋಡಿ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿ ಸದರಿ ಕಾರ್ಮಿಕರನ್ನು ಕರೆದುಕೊಂಡು ಬಂದ ಈ ಪ್ರಕರಣದ 4 ಜನ ಆರೋಪಿತರ ವಿರುದ್ಧ ಸಿ.ಐ.ಡಿ ಅಧಿಕಾರಿಗಳು ಪಿರ್ಯಾದಿ ಕೊಟ್ಟಿದ್ದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾಃ 41 ರವರ ಜಮೀನಿನಲ್ಲಿ ಜೀತ ಕಾರ್ಮಿಕರಾಗಿ ವಾಸವಿದ್ದ ಒಟ್ಟು 33 ಜನರ ಹೆಸರುಗಳು ಸದರಿ ಅಧಿಕಾರಿಗಳಿಂದ ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ಸದರಿ 33 ಜನ ಜೀತ ಕಾರ್ಮಿಕರನ್ನು ಈ ಪ್ರಕರಣದ 4 ಜನ ಆರೋಪಿತರು ಸೇರಿ ಸುಮಾರು 3 ತಿಂಗಳು ಜೀತ ಕಾರ್ಮಿಕರನ್ನಾಗಿ ರಸ್ತೆ ಕಾಮಗಾರಿ ಕೆಲಸಕ್ಕೆ ದುಡಿಸಿಕೊಂಡು ಸದರಿಯವರನ್ನು ಶೆಡ್ಡಿನಲ್ಲಿ ಕೂಡಿಹಾಕಿ ಅವರಿಗೆ ಎಲ್ಲಿಗೂ ಹೋಗಲು ಬಿಡದೇ, ಸರಿಯಾದ ಸಂಬಳವನ್ನು ನೀಡದೇ ಹಾಗೇ ಕೂಡಿ ಹಾಕಿದ ವಿಷಯ ನನಗೆ ಪೋಲಿಸರಿಂದ ಗೊತ್ತಾಯಿತು ಎಂದರೆ ಸರಿಯಲ್ಲ.

4. ದಿಃ 28.11.2017 ರಂದು ಪೋಲೀಸರ ಮುಂದೆ ಘಟನೆ ಗೊತ್ತಾದ ಬಗ್ಗೆ ಸವಿಸ್ತಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಕಳೆದ ವರ್ಷ --------------------------------- ಮೇಲಿಂದ

ತಿಳಿಯಿತು ಎಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ನಿಪಿಃ 9 ಎಂದು ಗುರುತಿಸಲಾಯಿತು.

5. ನನಗೆ ಈ ಘಟನೆಯ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ.ಜೆ.ಜಿ ವಕೀಲರ ಪರವಾಗಿ ಶ್ರೀ.ಎಸ್.ಬಿ.ಪಿ ವಕೀಲರಿಂದ ಆರೋಪಿತರ ಪರವಾಗಿ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.